ಶ್ರೀ ಜಿ. ಎಚ್. ಪುಟ್ಟಣ್ಣ.—ಈ ರೀತಿ ಅಧಿಕಾರಿಗಳು ಸ್ವಳ ವಿದ್ಯಮಾನಗಳನ್ನು ನಿರಾಕರಿಸಿ ವರ್ತಿಸಿದ್ದಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಪಾಟೀಲ್.—ಹಿಂದೆ ಆ ರೀತಿ ಏನೋ ಕೊಟ್ಟಿದ್ದಾರೆ. ಹಾಗೆ ಕೊಟ್ಟಿದ್ದು ಆಗಿಹೋಯಿತು. ಈಗ ಅದರಬಗ್ಗೆ ಏನು ಮಾಡಲಿಕ್ಕೂ ಆಗುವುದಿಲ್ಲವೆಂದು ರಿಪೋರ್ಟು ಬಂದಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ತಾವು ಇಲ್ಲಿಗೆ ಮಂತ್ರಿಗಳಾಗಿ ಬಂಡಮೇಲೆ ಹೀಗೆಲ್ಲಾ ಗೋಮಾಳಗಳನ್ನು ಉಳುಮೆಗೆ ಕೊಡಬಾರದೆಂದು ಒಂದು ಸರ್ಕ್ಯುಲರ್‌ನ್ನು ಹೊರಡಿಸಿದ್ದು ನಿಜವೇ?

ಶ್ರೀ ಎಂ. ಪಿ. ಪಾಟೀಲ್.—ಹಾಗೆ ಇಷ್ಟಅಡಿಕ್ಟೇಟ್ ಆಗಿರುವ ಕಡೆ ಕೊಡಬಾರದೆಂದು ತಿಳಿಸಲಾಗಿದೆ. ಇತ್ತೀಚೆಗೇನಾದರೂ ಆ ರೀತಿ ಆಗಿದ್ದರೆ ಅದನ್ನು ವಿಚಾರ ಮಾಡೋಣ.

ಶ್ರೀ ಜಿ. ಎಚ್. ಪುಟ್ಟಣ್ಣ.—ನಾನು 12 ವರ್ಷಗಳ ರಾಗಾಯತು ಎಂದು ಪ್ರಶ್ನೆ ಕೇಳಿದ್ದೆ—ಮೂರು ವರ್ಷಕ್ಕೆ ಮಾತ್ರ ಉತ್ತರ ಒದಗಿಸಿದ್ದೀರಿ.

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿದ್ದುದೇ ಮೂರು ವರ್ಷಗಳಿಗೆ.

ಶ್ರೀ ಜಿ. ಎಚ್ ಪುಟ್ಟಣ್ಣ.—ತಾವು ಈಗಲಾದರೂ ಈ ವಿಚಾರದಲ್ಲಿ ಸ್ಥಳೀಯ ಅಧಿಕಾರಿಗಳಿಂದ ರಿಪೋರ್ಟ್ ತರಿಸಿ, ಅದರ ಆಧಾರದಮೇಲೆ ಆ ಜಮೀನುಗಳನ್ನು ವಾಪಸ್ಸು ತೆಗೆದುಕೊಳ್ಳಲು ಪ್ರಯತ್ನ ಮಾಡುವಿರಾ?

ಶ್ರೀ ಎಂ. ಪಿ. ಪಾಟೀಲ್.—ಮಾನ್ಯ ಸದಸ್ಯರಿಗೊಂದು ವಿಚಾರ ತಿಳಿಸಬೇಕಾಗಿದೆ. ಈ ಜಮೀನುಗಳನ್ನು ಇಲ್ಲಿಗೆ ನಾಲ್ಕು ವರ್ಷಗಳ ಕೆಳಗೆ ಕೊಡಲಾಗಿದೆ. ಈಗ ಅವುಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ. ಆ ದಿವನ ಶ್ರೀ ಟಿ. ಜಿ. ಎಂ. ಆರಾಧ್ಯ ಎಂಬವರಿಗೆ ಐದು ಎಕರೆ 38 ಗುಂಟೆ ಜಮೀನನ್ನು, ಶ್ರೀಮತಿ ಕುನುಮ ಎಂಬವರಿಗೆ ಒಂದು ಎಕರೆ 30 ಗುಂಟೆ ಜಮೀನನ್ನು ಮತ್ತು ಜಗದೇಪ್ ಎಂಬವರಿಗೆ ಎರಡು ಗುಂಟೆ ಜಮೀನನ್ನು 1953-54ರಲ್ಲಿ ಕೊಡಲಾಗಿದೆ. ಆದರೆ ಈಗ ಇದರಬಗ್ಗೆ ಕ್ರಮ ಕೈಗೊಳ್ಳಲು ಲೀಗಲ್ ಆಸ್ಪೆಕ್ಟ್ ಪ್ರಕಾರ ಅವಕಾಶ ವಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ನೋಡಬೇಕಾಗಿದೆ. ಈಬಗ್ಗೆ ಈಗಾಗಲೇ ರೆವಿನ್ಯೂ ಕಮೀಷನರ್ ಅವರೂ ಸಹ ಒಂದು ನಿರ್ಣಯ ಕೊಟ್ಟಿದ್ದಾರೆ. ಇರಿಗೇಷ್ಟ ಪ್ರಾಜೆಕ್ಟ್‌ಗಳ ಕೆಳಗೆ ಹೆಚ್ಚು ಬೀಳು ಜಮೀನಿರಲು ಅವಕಾಶವಿಲ್ಲ. ಈ ಬಗ್ಗೆ 1954 ರಲ್ಲೇ ಒಂದು ನಿರ್ಣಯ ಕೊಡಲಾಗಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ರೆವಿನ್ಯೂ ಕಮಿಷನರು ತಮ್ಮ ಹತ್ತಿರ ಸಂಬಂಧಿಗಳಿಗೆ ಜಮೀನನ್ನು ಕೊಟ್ಟದ್ದರಿಂದ ಅದು ಪುಕಾರಿಗೆ ಬರಬಹುದೆಂಬ ಭೀತಿಯಿಂದ ಅನಂತರ ಹಾಗೆ ಯಾಬಗ್ಗೋ ಒಬ್ಬಿಬ್ಬರಿಗೆ ಜಮೀನು ಕೊಟ್ಟಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಪಾಟೀಲ್.—ನಾನಾಗಲೇ ಹೆಸರು ಹೇಳಿದವರ ವಿನಾ ಬೇರೆ ಯಾರಿಗೆ ಕೊಟ್ಟಿದ್ದಾರೋ ಆ ವಿಚಾರ ನನಗೆ ಗೊತ್ತಿಲ್ಲ.

Sri K. L. NARASIMHAIAH.—Is the case not before the Revenue Board in respect of this land?

Sri M. P. PATIL.—Sir, I do not know because the lands were given in 1953-54. If it is pending before the Revenue Board, it will be decided by the Revenue Board.

ಶ್ರೀ ಯು. ಎಂ. ಮಾದಪ್ಪ.—ಭೂಮಿಯನ್ನು ಸಾಗುವಳಿಗೆ ಸಂಬಂಧಪಟ್ಟವರಿಗೆ ಕೊಟ್ಟದ್ದು ಹಂಗಾಮಿ ಸಾಗುವಳಿಗೆ ಕೊಟ್ಟಿದೆ ಏನು?

Sri M. P. PATIL.—I have not got this information; I require notice.

ಶ್ರೀ ಬಿ. ಎಸ್. ಶಂಕರಪ್ಪ.—ಕಡಿಮೆ ಗೋಮಾಳ ವಿರುವಾಗ ಸಾಗುವಳಿಗೆ ಜಮೀನು ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ಈ ಸಂಬಂಧದಲ್ಲಿ ಒಂದು ಸರ್ಕ್ಯುಲರ್ ಹೊರಟಿದೆ. ಈ ಸರ್ಕ್ಯುಲರ್ ಹೊರಟನಂತರ ಅಮಲ್ದಾರರು ಹಾಗೆ ಮಾಡಿದ್ದರೆ ಅದು ಸರಕಾರಿ ಆಜ್ಞೆಗೆ ವಿರೋಧವಾಗಿ ಆಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಬಹಳ ಕಡಿಮೆ ಗೋಮಾಳ ಇರಬಾರದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇನು?

ಶ್ರೀ ಎಂ. ಪಿ. ಪಾಟೀಲ್.—ಹಾಗಲ್ಲ. ಈ ಸಂಬಂಧದಲ್ಲಿ ರೂಲ್ಸು ಸ್ಪಷ್ಟವಾಗಿದೆ. ಕೆಲವೊಂದು ಹಳ್ಳಿಗಳಲ್ಲಿ ಗೋಮಾಳ ಕಡಿಮೆ ಇದ್ದರೂ ಹಿಂದಿನ ಕಾನೂನಿನ ಪ್ರಕಾರ ಡೆಪ್ಯೂಟಿ ಕಮೀಷನರರ ಪರವಾನಗಿಯಿಂದ ಕೆಲವೊಂದು ಹಳ್ಳಿಗಳಲ್ಲಿ ಭೂಮಿಯನ್ನು ಸಾಗು ಮಾಡಲಿಕ್ಕೆ ಕೊಟ್ಟಿದ್ದಾರೆ. ನೀರಾವರಿ ಪ್ರದೇಶದಲ್ಲಿ ಭೂಮಿಯನ್ನು ಸಾಗು ಮಾಡಲಿಕ್ಕೆ ಕೊಡಲಾಗಿದೆ. ಏಕೆಂದರೆ ಗೋಮಾಳದ ಉಪಯೋಗವಾಗುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಅಧಿಕಾರಿಗಳ ಗಮನಕ್ಕೆ ತಂದರೆ ಕಡಮೆ ಇದ್ದಲ್ಲಿ ಹೆಚ್ಚಿಗೆ ಗೋಮಾಳ ಜಮೀನು ಕೊಡುತ್ತೀರಾ?

Sri M. P. PATIL.—That is a general question. ಪ್ರತಿಯೊಂದು ಕೇಸನ್ನು ಡೆಪ್ಯೂಟಿ ಕಮಿಷನರರು ವಿಚಾರಣೆ ಮಾಡುವರು.

Development of Madagada and Ayyana Tanks.

Q.—409. **Sri D. H. RUDRAPPA** (Kadur).—

Will the Government be pleased to state:—

(*a*) the extent of achkat under the Madagada tank and Ayyana tank;

(*b*) the capacity of each of the above tanks;

(*c*) the steps taken by them under the Five-Year Plan for development of those two tanks?

A.—**Sri H. K. VEERANNA GOWDH** (Minister for Public Works).—

(*a*) and (*b*)—

	Atchkat	Capacity
Madag tank	... 5,080 Acres	1,410·72 Units.
Ayyanakere	... 3,425 Acres and 18 Guntas.	1,261 Units.

(c) No development works are proposed.

ಶ್ರೀ ಡಿ. ಎಚ್. ರುದ್ರಪ್ಪ.—ಮದಗದ ಕೆರೆಯ ಕೆಳಗಿನ ಅಚ್ಚಕಟ್ಟು 5030 ಎಕರೆ ಇದೆ ಎಂದು ಉತ್ತರದಲ್ಲಿ ಹೇಳಿದೆ. ಇಷ್ಟು ಅಚ್ಚಕಟ್ಟಿಗೆ ನೀರು ಸಾಕಾಗುವದಿಲ್ಲವಾದ್ದರಿಂದ ಬಡಾವಣೆ ಮಾಡುವ ಯೋಜನೆ ಇದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೀರು ಸಾಕಾಗುತ್ತದೆ.

Cultivation and Survey No. 1 of Yeslur Hobli, Sakleshpur Taluk.

Q.—417. Sri B. N. BORANNA GOWDA (Belur).—

Will the Government be pleased to state:—

(*a*) when Hulagathur Survey No. 1 of Yeslur Hobli, Sakleshpur Taluk, was given for temporary cultivation to Sri Mohamed Peer;

(*b*) the conditions imposed when this survey number was given;

(*c*) the name of the khatedar at present;

(*d*) since how long this khatedar is cultivating this land;

(*e*) the extent of this land;

(*f*) the purpose for which this land was given?

A.—Sri M. P. PATIL (Minister for Revenue).—

(*a*) An extent of 25 acres of land in S. No. 1 of Hulagathur village, Yeslur Hobli, was granted to Sri Mohamed Peer in G.O. No. R. 5.5396-7 L.R. 16-39-99, dated 16-3-1940 at an upset price of Rs. 15 per acre for cardamom cultivation.

(*b*) Subject to non-alienation at any time.

(*c*) The grantee Sri Mohamed Peer has leased out the land in favour of Sri Brahmasuriah *bin* Padmiah for a period of 30 years on certain terms under a registered deed in 22-11-1940. Subsequently during the year 1948 the grantee executed a release deed in favour of Sri Brahmasuriah and registered it. It is further reported that the mutation has been accepted. The propriety of the acceptance is being examined.

(*d*) The entries in the pahani indicate that the land has been in possession of the grantee Sri Mohamed Peer, till 1948-49 and in possession of Sri Brahmasuriah since 1949-50.

(*e*) Twenty-five acres.

(*f*) For cardamom cultivation.

ಶ್ರೀ ಬಿ. ಎನ್. ಬೋರಣ್ಣಗೌಡ.—ಸ್ವಾಮಿ, ಹುಲಗತೂರ ಗ್ರಾಮವು ಬೇಜರಾಕ್ ಆಗಿಲ್ಲವೇ?

*Sri M. P. PATIL.—I have no knowledge. I would require notice.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹುಲಗತೂರ ಗ್ರಾಮದಲ್ಲಿ 25 ಎಕರೆ ಭೂಮಿಯನ್ನು ಎಕರೆಯೊಂದಕ್ಕೆ 15 ರೂಪಾಯಿ ಬೆಲೆಗೆ ಏಲಕ್ಕಿ ಸಾಗುವಳಿ ಮಾಡುವದಕ್ಕೆ ಕೊಡಲಾಯಿತು ಎಂದು ಉತ್ತರದಲ್ಲಿ ಹೇಳಿದೆ. ಆದರೆ ಅಲ್ಲಿ 100 ಎಕರೆ ಭೂಮಿ ಸಾಗುವಳಿಯಾಗಿರುವದು ತಮ್ಮ ಅವಗಾಹನೆಗೆ ಬಂದಿದೆಯೋ?

Sri M. P. PATIL.—I do not know Sir.

ಶ್ರೀ ಬಿ. ಎನ್. ಬೋರಣ್ಣಗೌಡ—ಮಹಮ್ಮದಪೀರ್ ಎಂಬವರು ಬದುಕಿದ್ದಾರೇನು ಸ್ವಾಮಿ?

ಶ್ರೀ ಎಂ. ಪಿ. ಪಾಟೀಲ್.—ಇದು ತಮಗೇ ಹೆಚ್ಚಾಗಿ ಗೊತ್ತಿರ ಬೇಕು.

ಶ್ರೀ ಬಿ. ಎನ್. ಬೋರಣ್ಣಗೌಡ.—ಅವರು 1941ರಲ್ಲಿ ನತ್ತು ಹೋಗಿದ್ದಾರೆ. ಈ ಜಮೀನನ್ನು ಯಾರು ಸಾಗುವಳಿ ಮಾಡುತ್ತಾರೆ?

ಶ್ರೀ ಎಂ. ಪಿ. ಪಾಟೀಲ್.—ವೆಂಕಟರಾಮಯ್ಯ ಎಂಬವರು ಸಾಗುವಳಿ ಮಾಡುತ್ತಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಜಮೀನು ಬರೀದಿ ಕೊಟ್ಟಿದ್ದಾರೆ. ವಾಪಸು ತೆಗೆದುಕೊಳ್ಳುವದಕ್ಕೆ ಕಾಗದ ಬರೆದು ಏನಾದರೂ ಕ್ರಮ ತೆಗೆದು ಕೊಳ್ಳುತ್ತೀರಾ?

Sri M. P. PATIL.—I have already replied. It is under consideration and we are seriously thinking whether we should resume the land.

Sri V. S. PATIL.—Sir, from the answer given it appears that the rules against alienation were made on 22nd November 1940. Why the Government is sleeping over this for the last 17 years?

Sri M. P PATIL.—Sir, now we are examining all these cases snd I am also making enquiry as to why there was delay and who is responsible for this delay.

Sri K. PUTTASWAMY.—Is the condition of non-alienation of land a valid condition?

Sri M. P. PATIL.—Yes, it is a valid condition.